<u>2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ</u>

<u>ಸತ್ರ ಮೊಕದ್ದಮೆ ಸಂಖ್ಯೆ: **71/2025**</u>

ಪಿ.ಡಬ್ಲ್ಯು: **3** ಸಿಡಬ್ಲ್ಯು: **4**

ಸಾಕ್ಷಿಯ ಹೆಸರು : ಗೌರಮ್ಮ
ಗಂಡನ ಹೆಸರು : ನರಸಿಂಹ
ವಯಸ್ಸು : **65** ವರ್ಷ
ವೃತ್ತಿ : ಬಳೆ ವ್ಯಾಪಾರ
ವಾಸಸ್ಥಳ : ಬಳ್ಳಾರಿ

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ: **17.06.2026.**

<u>ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:-</u>

**1)** ನನಗೆ ಚಾಸಾ-**1** ಮಗಳಾಗಬೇಕು. ಚಾಸಾ-**5** ನನಗೆ ಅಕ್ಕನಾಬೇಕು. ಚಾಸಾ-**6** ಮತ್ತು **7** ರವರ ಪರಿಚಯವಿದೆ. ಅವರುಗಳ ಮನೆ ನಮ್ಮ ಮನೆಯ ಪಕ್ಕದಲ್ಲಿ ಇವೆ. ನನಗೆ ಆರೋಪಿತರುಗಳ ಪರಿಚಯವಿದೆ. ಅವರ ಮನೆಯೂ ಸಹ ನಮ್ಮ ಮನೆಯ ಪಕ್ಕದಲ್ಲಿ ಇವೆ.

**2)** **2** ವರ್ಷಗಳ ಹಿಂದೆ ನಮ್ಮ ಮನೆಯ ಮುಂದೆ ಇದ್ದ ಕಾಲುವೆ ಬಳಿ ಚಾಸಾ-**1** ಬಟ್ಟೆ ಹಿಂಡಲು ಹೋಗಿದ್ದಳು. ಚಾಸಾ-**1** ಫೋನಿನಲ್ಲಿ ತನ್ನ ಸೊಸೆಗೆ ಬೈಯುತ್ತಾ ಮಾತನಾಡುತ್ತಿದ್ದಳು. ಆಗ **4** ನೇ ಆರೋಪಿಯು ಅಲ್ಲಿಗೆ ಬಂದು ನನಗೆ ಯಾಕೆ ಬೈಯುತ್ತಿದ್ದೀಯಾ ಎಂದು ಚಾಸಾ-**1** ರವರನ್ನು ಕೇಳಿದಳು. ಆಗ ಸುರೇಶ ನನ್ನ ಮಗಳನ್ನು ಕಾಲುವೆಯಿಂದ ಎತ್ತಿಕೊಂಡು ಬಂದು ಮನೆಯು ಮುಂದೆ ಹಾಕಿದನು. ಆಗ ಎಲ್ಲಾ ಆರೋಪಿತರು ಸೇರಿ ನನ್ನ ಮಗಳಿಗೆ ಕೈಯಿಂದ ಮೈ ಮೇಲೆ ಎಲ್ಲಾ ಹೊಡೆದರು. ಸದರಿ ಘಟನೆಯ ನಂತರ ನನ್ನ ಮಗಳಿಗೆ ಆರಾಮಿಲ್ಲದ ಹಾಗೆ ಆಗಿತ್ತು. ನನ್ನ ಮಗಳನ್ನು ನಾನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ನನ್ನ ಮಗಳು ಆಸ್ಪತ್ರೆಯಲ್ಲಿ ಮೂರು ದಿವಸ ಚಿಕಿತ್ಸೆ ಪಡೆದು ನಂತರ ಠಾಣೆಗೆ ಹೋಗಿ ದೂರನ್ನು ಕೊಟ್ಟಿದ್ದಳು. ಈ ಎಲ್ಲಾ ಸಂಗತಿಗಳ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ. ಘಟನೆ ನಡೆದಾಗ ಮುಂಜಾನೆ ಸುಮಾರು **09** ರಿಂದ **09.30** ಗಂಟೆ ಆಗಿತ್ತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಅವರ ವಾದವನ್ನು ಕೇಳಿ, ಸಾಕ್ಷಿಯ ಹೇಳಿಕೆಯನ್ನು ಹಾಗೂ ಮುಖ್ಯ ವಿಚಾರಣೆಯನ್ನು ಪರಿಶೀಲನೆ ಮಾಡಿ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಸರ್ಕಾರಿ ಅಭಿಯೋಜಕರಿಗೆ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).

<u>ಪಾಟೀಸವಾಲುಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-</u>

3) ಆರೋಪಿತರು ಘಟನೆ ಸಮಯದಲ್ಲಿ ನನ್ನ ಮಗಳಿಗೆ ಬೋಸುಡೆ ಸೂಳೆ ಮತ್ತು ಕತ್ತೆ ಸೂಳೆ ಎಂದು ಬೈದಿದ್ದರು ಎಂದರೆ ಸರಿ. 4 ನೇ ಆರೋಪಿಯು ಕೈಯಿಂದ ಚಾಸಾ-1 ರವರ ಕಪಾಳಕ್ಕೆ ಹೊಡೆದಿದ್ದಳು ಎಂದರೆ ಸರಿ. 1 ನೇ ಆರೋಪಿಯು ನನ್ನ ಮಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಅವಳಿಗೆ ಅವಮಾನ ಆಗುವ ರೀತಿಯಲ್ಲಿ ಕಾಲುವೆಯಿಂದ ಮೇಲಕ್ಕೆ ಎತ್ತಿಕೊಂಡು ಬಂದಿದ್ದ ಎಂದರೆ ಸರಿ. 2 ನೇ ಆರೋಪಿಯು ನನ್ನ ಮಗಳ ಸೀರೆಯನ್ನು ಹಿಡಿದು ಎಳೆದಾಡಿದ್ದ ಎಂದರೆ ಸರಿ. 2 ನೇ ಆರೋಪಿಯು ನನ್ನ ಮಗಳಿಗೆ ನನ್ನ ಮಗಳಿಗೆ ಸೂಳೆ ಎಂದು ಬೈದಿದ್ದ ಎಂದರೆ ಸರಿ. 3 ನೇ ಆರೋಪಿಯು ಸಹ ನನ್ನ ಮಗಳ ಕೈ ಹಿಡಿದು ಎಳೆದಾಡಿದ್ದ ಎಂದರೆ ಸರಿ. ನಾನು, ಚಾಸಾ-5 ರಿಂದ 7 ಸೇರಿ ಜಗಳ ಬಿಡಿಸಿದ್ದೆವು ಎಂದರೆ ಸರಿ. ಆರೋಪಿತರು ಅಲ್ಲಿಂದ ಹೋಗುವ ಸಮಯದಲ್ಲಿ ನನ್ನ ಮಗಳಿಗೆ ಪ್ರಾಣ ಬೆದರಿಕೆ ಹಾಕಿದ್ದರು ಎಂದರೆ ಸರಿ.

<u>ಪಾಟೀಸವಾಲು ಆರೋಪಿ ಪರವಾಗಿ ಶ್ರೀ ವೈ.ಕೆ. ವಕೀಲರಿಂದಃ</u>

4) ನಾನು ವಿದ್ಯಾಭ್ಯಾಸ ಮಾಡಿಲ್ಲ. ಚಾಸಾ-5 ರಿಂದ 7 ರವರು ನನ್ನ ಮನೆಯ ಸುತ್ತಮುತ್ತಲು ವಾಸವಿದ್ದಾರೆ ಎಂದರೆ ಸರಿ. ಅವರ ಮತ್ತು ನಮ್ಮ ಸಂಬಂಧ ಚೆನ್ನಾಗಿದೆ ಎಂದರೆ ಸರಿ. ಅವರ ಮನೆಯ ಕಾರ್ಯಕ್ರಮಗಳಿಗೆ ನಾವು ಹೋಗುತ್ತೇವೆ ಹಾಗು ನಮ್ಮ ಮನೆಯ ಕಾರ್ಯಕ್ರಮಗಳಿಗೆ ಅವರು ಬರುತ್ತಾರೆ ಎಂದರೆ ಸರಿ. ಘಟನೆ ನಡೆದಿದೆ ಎಂದು ಹೇಳಿದ ದಿವಸದಿಂದ 3 ವರ್ಷದ ಹಿಂದಿನಿಂದಲು ಅಂದರೆ ನಾವು ಆ ಏರಿಯಾಕ್ಕೆ ಬಂದ ನಂತರದಿಂದ ಆರೋಪಿತರು ಮತ್ತು ನಮ್ಮ ನಡುವೆ ಜಗಳಗಳು ಆಗುತ್ತಿದ್ದವು. 4 ನೇ ಆರೋಪಿಯು ನನ್ನ ಮಗಳ ವಿರುದ್ಧ ದೂರನ್ನು ಕೊಟ್ಟಿದ್ದಳು ಎಂದರೆ ಸರಿ.

**5)** ನನ್ನ ಮಗಳು ಏರಿಯಾದ ಬೇರೆ ಬೇರೆ ಜನರ ಜೊತೆ ಗಲಾಟೆ ಮಾಡಿಕೊಂಡು ಅವರಿಗು ಸಹ ಬೈದಾಡುತ್ತಿದ್ದುದ್ದರಿಂದ ಅವರುಗಳು ಸಹ ನನ್ನ ಮಗಳ ವಿರುದ್ಧ ದೂರನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನ ಹೆಬ್ಬೆಟ್ಟನ್ನು ಠಾಣೆಯಲ್ಲಿ ಮಾಡಿಸಿಕೊಂಡಿದ್ದರು. ಪೊಲೀಸರು ನಾನು ಹೇಳಿದಂತೆ ಬರೆದುಕೊಂಡಿದ್ದರು. ಅದಕ್ಕೆ ನಾನು ಹೆಬ್ಬೆಟ್ಟಿನ ಗುರುತು ಹಾಕಿದ್ದೆ. ಆರೋಪಿತರು ನನ್ನ ಮಗಳಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಅವಳಿಗೆ ಹೊಡೆದಿಲ್ಲ, ಅವಳಿಗೆ ಮಾನ ಹಾನಿ ಮಾಡಿಲ್ಲ ಮತ್ತು ಪ್ರಾಣ ಬೆದರಿಕೆಯನ್ನು ಹಾಕಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮಗಳ ವಿರುದ್ದ ದೂರನ್ನು ಸಲ್ಲಿಸಿದ್ದರಿಂದ ನನ್ನ ಮಗಳು ಆರೋಪಿತರ ವಿರುದ್ದ ಸುಳ್ಳು ದೂರನ್ನು ದಾಖಲಿಸಿದ್ದಾಳೆ ಎಂದರೆ ಸರಿಯಲ್ಲ. ನಾನು ನನ್ನ ಮಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**6)** ಘಟನೆ ನಡೆದ ಸ್ಥಳದ ಚೆಕ್ಕುಬಂದಿಯನ್ನು ನನಗೆ ಹೇಳಲು ಬರುವುದಿಲ್ಲ. ನಾನು ಮುಂಜಾನೆ **06.30** ಕ್ಕೆ ಬಳೆ ವ್ಯಾಪಾರ ಮಾಡಲು ಹೋಗುತ್ತೇನೆ ಮತ್ತು ಮುಂಜಾನೆ **11.30** ಗಂಟೆಗೆ ವಾಪಸ್ಸು ಮನೆಗೆ ಬರುತ್ತೇನೆ. ನಾನು ಘಟನೆ ಸಮಯದಲ್ಲಿ ಹಾಜರಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಮತ್ತು ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಆರೋಪಿತರ ವಿರುದ್ದ ನಾವು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.